ಪದಬಂಧ




ಎಡದಿಂದ ಬಲಕ್ಕೆ:

1. ಆ ಪದ್ಯಕ್ಕೆ ಒಳ್ಳೆಯ ವಿವರಣೆ ಕೊಟ್ಟ ಶಿಕ್ಷಕ ಗೊತ್ತೇ? (4)
3. ಪ್ರಾಣಾಯಾಮವನ್ನು ಆರಂಭಿಸುವಾಗ ಓಂಕಾರ (3)
4. ಕೆಲಸವನ್ನು ಆರಂಭಿಸಲು ಮುಂಜಾನೆಯೇ ಸರಿ (3)
6. ಪ್ರತಿ ದಿನವೂ ಅಲ್ಲಿ ತೇರು-ಮೆರವಣಿಗೆ (4)
7. ಸರ್ವರಿಗೂ ಲಭಿಸೀತು ಸರೋವರ ಜನ್ಯ ತಾವರೆ (4)
9. ರಸ್ತೆಯಿಂದ ತಪ್ಪಿದ್ದು ಒಂದು ಪಾತಾಳ ಲೋಕಕ್ಕೆ ತಲುಪಿತ್ತು (4)
12. ವಿರಸವನ್ನ ತ್ಯಜಿಸಿ. ಅಲ್ಲೇ ಎಲ್ಲ 'ಕಾವ್ಯ ರುಚಿ' ನೋಡಿ (4)
15. ಪರಿಕರಗಳೆಲ್ಲ ಹರಣವಾದದ್ದನ್ನು ಕುರಿತ ಘಟನೆ, ಕೇಸು (4)
17. ರೇಗಿಸಲು ಬಂದೊಡನೆ ಕಡ ಪಡೆದವ ಹಿಂದು ಮುಂದು (4)
18. ಕಳಿಸುವುದು ಸಾಧ್ಯ ಇಲ್ಲ. ಅದು ಪವಿತ್ರ ಕೊಡ (3)
19. ವಿರುದ್ಧವೇನಿಲ್ಲ. ಶುಭ್ರ ಬಿಳಿ ಬಣ್ಣ, ಅಷ್ಟೆ (3)
20. ತೀರ್ಮಾನಿಸಿದ್ದನ್ನೆಲ್ಲ ಅಲ್ಲೇ ಮಾಯ ಮಾಡುವುದೇ? (4)

ಮೇಲಿಂದ ಕೆಳಕ್ಕೆ:

1. ಅವನೂ ಈ ಭೂಮಿಯಲ್ಲೇ ಜನ್ಮ ತಾಳಿದವ (4)
2. ವಕ್ರತನವನ್ನೆಲ್ಲ ಸರಿಪಡಿಸಿದ ಕನಸು (4)
3. ಪಹರೆ ತಪ್ಪಿಸಿದ್ದಕ್ಕೆ ಬಿತ್ತು ಏಟು (3)
5. ಕುಕ್ಕೆ ಹೊತ್ತು ತಂದು ಏಕೋ ಕೆಟ್ಟದಾಗಿ ಪ್ರಸಿದ್ಧ (3)
7. ದಾಸಯ್ಯನಾದರೂ ಬೇಕೇ ಬೇಕು ಮನೆ (3)
8. ತಾರಸಿಗೆ ಒಯ್ದದ್ದು ಸುಪ್ರಸಿದ್ಧ ತಂತೀ ವಾದ್ಯ (3)
10. ಸಾರಥಿಯ ಕೆಲಸ ಕೊಟ್ಟದ್ದು ಯೋಗ್ಯವೇ ಆಯಿತು (3)
11. ಒಣಗಲಿ ಬಿಡಿ. ಅದೆಲ್ಲ ಬರೀ ಉಪ್ಪು (3)
13. ತರಕಾರಿ ಮಾರುವವನೂ ವ್ಯಾಪಾರಿಯೇ ತಾನೇ? (3)
14. ಸರತಿಯ ಸಾಲಿನಲ್ಲಿ ವೀಣೆ ಹಿಡಿದ ದೇವತೆಯೇ? (4)
15. ಸಂಪ್ರದಾಯವನ್ನು ಪಾಲಿಸಲೆಂದು ಅಲಂಕಾರ ಸಾಮಗ್ರಿ (4)
16. ಶೂರರೆಲ್ಲ ಸೇರಿ ಸಂಗ್ರಹಿಸಿದ್ದು ಮಾವಿನ ಫಲ (3)

## 08-5-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭ್ಯಂತರ; 3. ಪ್ರಭವ; 4. ಹವನ; 6. ಅನುಚರ; 8. ಹಗೆತನ; 10. ಕಲಂಕಿತ; 12. ದಿವಾಕರ; 16. ಟಗರು; 17. ರಮಣಿ, 18. ಹುರಿಯಾಳು.

ಮೇಲಿಂದ ಕೆಳಕ್ಕೆ:

1. ಅವನಿ; 2. ರಹಸ್ಯ; 3. ಪ್ರಪಂಚ; 5. ನಡಿಗೆ; 6. ಅಮಾಯಕ; 7. ರಸಯುತ; 8. ಹಟವಾದಿ; 9. ನದೀತೀರ; 11. ಕಿರೀಟ; 13. ವಾರುಣಿ; 14. ಅರುಹು; 15. ಹರಳು.

## ಪ್ರಶ್ನಾಂಕಣ

# ದೊಡ್ಡ ಬೆಕ್ಕುಗಳು ಯಾವುವು?

ಸ್ತನಿ ವರ್ಗಕ್ಕೇ ಸೇರಿರುವ 'ಬೆಕ್ಕು'ಗಳದೇ ಒಂದು ವಿಶಿಷ್ಟ ಕುಟುಂಬ. ಮಾರ್ಜಾಲ ಕುಟುಂಬದಲ್ಲಿ ಒಟ್ಟು 37 ಪ್ರಭೇದಗಳಿವೆ. ಈ ಪೈಕಿ ಎಂಟು ಪ್ರಭೇದಗಳು 'ದೊಡ್ಡ ಬೆಕ್ಕು'ಗಳೆಂದೇ (ಬಿಗ್ ಕ್ಯಾಟ್ಸ್) ವರ್ಗೀಕೃತ. ಏಕೆಂದರೆ ಉಳಿದೆಲ್ಲ ಪ್ರಭೇದಗಳಿಗಿಂತ ಇವುಗಳದು ಸ್ಪಷ್ಟವಾಗಿಯೇ ದೊಡ್ಡ ಶರೀರ. ದೊಡ್ಡ ಬೆಕ್ಕುಗಳ ಅಷ್ಟ ವಿಧಗಳು ಇವು:

1. ಹುಲಿ: ಗಾತ್ರದಲ್ಲಿ ಪ್ರಥಮ ಸ್ಥಾನ. ಪ್ರಸ್ತುತ ಐದು ಉಪ ಪ್ರಭೇದಗಳಿವೆ. ಅತ್ಯಂತ ದೈತ್ಯ ಗಾತ್ರದ್ದು ಸೈಬೀರಿಯನ್ ಹುಲಿ. ಭಾರತದಲ್ಲಿರುವುದು 'ಬೆಂಗಾಲ್ ಟೈಗರ್' ಹುಲಿಗಳ ವಾಸ ಏಷಿಯ ಖಂಡಕ್ಕೆ ಸೀಮಿತ. ಈ ಬೆಕ್ಕಿನದೇ ಅತ್ಯಂತ ಕಡಿಮೆ ಸಂಖ್ಯೆ.

2. ಸಿಂಹ: ಇಡೀ ಮಾರ್ಜಾಲ ಕುಟುಂಬದಲ್ಲಿ 'ಸಂಘ ಜೀವನ' ನಡೆಸುವ ಬೆಕ್ಕು ಇದೊಂದೇ. ಸಿಂಹಗಳ ನೈಸರ್ಗಿಕ ನೆಲೆ ಆಫ್ರಿಕ ಮತ್ತು ಏಷಿಯ (ಭಾರತದಲ್ಲಿ ಮಾತ್ರ) ಖಂಡಗಳಿಗೆ ಸೀಮಿತ.

3. ಚೀತಾ: ಆಫ್ರಿಕದಲ್ಲಷ್ಟೇ ವಾಸ. 'ಅತ್ಯಂತ ವೇಗದ' ಓಟಗಾರ.

4. ಚಿರತೆ (ಲೆಪರ್ಡ್): ಆಫ್ರಿಕದಿಂದ ಏಷಿಯದವರೆಗೆ ಅತ್ಯಂತ ವಿಸ್ತಾರ



ವಾಸಕ್ಷೇತ್ರ-ಬೇಟೆಯಾಡಿದ ಭಾರೀ ಪ್ರಾಣಿಗಳನ್ನು ಕಚ್ಚಿ ಹಿಡಿದು ವೃಕ್ಷಗಳನ್ನು ಹತ್ತಬಲ್ಲ ಬಲಿಷ್ಠ ಬೆಕ್ಕು.

5. ಹಿಮ ಚಿರತೆ: ಶೀತಲ ಪ್ರದೇಶದ ಬೆಕ್ಕು. ಹಿಮಾಲಯದಿಂದ ಸೈಬೀರಿಯಾವರೆಗೆ ಈ ಬೆಕ್ಕಿನ ನೆಲೆ. ಎಷ್ಟೇ ಚಳಿಯನ್ನೂ ಸಹಿಸಬಲ್ಲ ಶಕ್ತಿ.

6. ಜಾಗ್ವಾರ್: ಗರಿಷ್ಠ ದವಡೆ ಶಕ್ತಿಯ ಬಲಿಷ್ಠ ಬೆಕ್ಕು. ಮಧ್ಯ ಅಮೆರಿಕದಲ್ಲಿ ವಾಸ್ತವ್ಯ. ಬ್ರೆಜಿಲ್‌ನ ಪ್ಯಾಂಟನಾಲ್ ಪ್ರದೇಶದಲ್ಲಿ ಅತ್ಯಧಿಕ ಸಂಖ್ಯೆ.

7. ಪ್ಯೂಮಾ: ಪರ್ವತ ಸಿಂಹ, ಪ್ಯಾಂಥರ್, ಕಾಗ್ವಾರ್ ಎಂಬ ಹೆಸರುಗಳು ಕೂಡ. ಸಿಂಹದಂತೆಯೇ ಚಿತ್ತಾರ ರಹಿತ ಚರ್ಮ. ಉತ್ತರ ಅಮೆರಿಕ, ದಕ್ಷಿಣ ಅಮೆರಿಕಗಳಲ್ಲಿ ವಾಸ.

8. ಕ್ಲೌಡೆಡ್ ಲೆಪರ್ಡ್: ದೊಡ್ಡ ಬೆಕ್ಕುಗಳಲ್ಲಿ ಗಾತ್ರದಲ್ಲಿ ಕೊನೆಯ ಸ್ಥಾನ. ಆಗ್ನೇಯ ಏಷಿಯದ ಅಡವಿಗಳಲ್ಲಷ್ಟೇ ವಾಸ.

■ ಎನ್. ವಾಸುದೇವ್